# ನನ್ನ ಓದು

1967ರಲ್ಲಿ ನಕ್ಸಲ್‌ಬಾರಿ ಎಂಬಲ್ಲಿ ಹಳ್ಳಿಯ ರೈತರು ಸಂಘಟಿತರಾಗಿ ಜಮೀನ್ದಾರರ ಮೇಲೆ ದಾಳಿ ಮಾಡುವುದರೊಂದಿಗೆ ಭಾರತದಲ್ಲಿ ಅಧಿಕೃತವಾಗಿ ಆರಂಭವಾದ ನಕ್ಸಲ್ ಚಳವಳಿಯ ಪಾತ್ರದಲ್ಲಿ ಕಳೆದ ಐದೂವರೆ ದಶಕಗಳಲ್ಲಿ ಸಾಕಷ್ಟು ನೀರು ಹರಿದುಹೋಗಿದೆ. ಏರಿಳಿತಗಳು ಕಾಣಿಸಿಕೊಂಡಿವೆ. ನಕ್ಸಲ್ ಬಾರಿಯಿಂದ ಹಿಡಿದು 'ಅರ್ಬನ್ ನಕ್ಸಲ್' ಎಂಬ ವ್ಯಂಗ್ಯೋಕ್ತಿವರೆಗೆ ಸಾಕಷ್ಟು ಜನರು ಈ ಬೆಂಕಿಯಲ್ಲಿ ತಮ್ಮ ಬೇಳೆ ಬೇಯಿಸಿಕೊಂಡಿದ್ದಾರೆ. ಹಾಗೆಯೇ ಕೈ ಸುಟ್ಟುಕೊಂಡವರೂ ಇದ್ದಾರೆ.

ನಕ್ಸಲರ ಕಾರ್ಯಚಟುವಟಿಕೆಯ ಕೇಂದ್ರ ಸ್ಥಾನದಂತಿರುವ ದಂಡಕಾರಣ್ಯದ, ಅದರಲ್ಲಿಯೂ ವಿಶೇಷವಾಗಿ ಛತ್ತೀಸಗಢದ ಬಸ್ತರ್ ಅನ್ನು ಕೇಂದ್ರವಾಗಿಟ್ಟುಕೊಂಡು ಕಥನವನ್ನು ಕಟ್ಟುತ್ತ ಹೋಗುವ ಆಶುತೋಷ್ ಭಾರದ್ವಾಜ್ ಅವರ 'ನಕ್ಸಲ್ ದೇಶ್ ಕೀ ಮರೀಚಿಕಾ', ನಕ್ಸಲರ ಕುರಿತಾದ ಪುಸ್ತಕ ಅಲ್ಲ. ಅವರ ಸಿದ್ಧಾಂತಗಳ, ಉದ್ದೇಶಗಳನ್ನು ಸಮರ್ಥಿಸುವ ಅಥವಾ ವಿರೋಧಿಸುವುದು ಆಶುತೋಷ್ ಉದ್ದೇಶ ಅಲ್ಲವೇ ಅಲ್ಲ. ಈ ಪುಸ್ತಕದ ಶಕ್ತಿ ಇರುವುದೇ ಯಾವೊಂದು ಸಿದ್ಧ ಸಿದ್ಧಾಂತಕ್ಕೆ ಕಣ್ಮುಚ್ಚಿ ಶರಣಾಗದೆ ತನ್ನ ಚರ್ಮಕ್ಕೆ ತಾಕಿದ, ಮನಸ್ಸಿಗೆ ಕಪ್ಪಿದ ಅನುಭವ-ಕಥನಗಳನ್ನು ತೀವ್ರವಾಗಿ ಕಟ್ಟುತ್ತ ಹೋಗುವುದರಲ್ಲಿ. ಅದೂ ಗೊತ್ತಿರುವುದನ್ನು ಘಂಟಾಘೋಷವಾಗಿ ಹೇಳುತ್ತಿದ್ದೇನೆ ಎಂಬ ಅಹಂಕಾರದಿಂದಲ್ಲ... 'ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ?', 'ಇದೆಲ್ಲದರ ಅರ್ಥ ಏನು?' ಎಂಬ ಪ್ರಶ್ನೆಗಳಿಗೆ ತೀವ್ರವಾಗಿ, ಆಳವಾಗಿ ಎದುರಾದಾಗ ಹುಟ್ಟಿಕೊಂಡ ಜಿಜ್ಞಾಸೆಯ ಧಾಟಿಯಲ್ಲಿ ಇಡೀ ಕಥನ ಸಾಗುವುದರಿಂದ ಈ ಕೃತಿಗೊಂದು ಜೀವನದಿಯ ಗುಣ ದಕ್ಕಿದೆ. ಆಶುತೋಷ್ ಪತ್ರಕರ್ತರು; ಕತೆಗಾರರೂ ಹೌದು. ಈ ಕೃತಿಯಲ್ಲಿ ಪತ್ರಕರ್ತನ ವಸ್ತುನಿಷ್ಠತೆ ಮತ್ತು ಕತೆಗಾರನ ಒಳನೋಟಗಳು ಎರಡೂ ಒಂದು ವಿಶಿಷ್ಟ ಹದದಲ್ಲಿ ಬೆರೆತಿವೆ. ಆ ಹದವೇ, ಈ ಪುಸ್ತಕಕ್ಕೊಂದು ಆಳವನ್ನೂ, ಸಂಕೀರ್ಣತೆಯನ್ನೂ ಕೊಟ್ಟಿದೆ. ತಾನು, ಪತ್ರಕರ್ತನೋ ಕತೆಗಾರನೋ ಎಂಬ ಜಿಜ್ಞಾಸೆಯೂ ಲೇಖಕರಿಗೆ ಬರುತ್ತದೆ.

ಕಥನದ ದೃಷ್ಟಿಯಿಂದಷ್ಟೇ ಅಲ್ಲ, ಕಟ್ಟುವಿಕೆಯ ದೃಷ್ಟಿಯಿಂದಲೂ ಇದು ಬಹಳ ಮಹತ್ವದ ಮತ್ತು ಮುಖ್ಯವಾದ ಪ್ರಯತ್ನ. ಕಪ್ಪು-ಬಿಳುಪಿನ ಎರಡೂ ತುದಿಗಳ ನಡುವಿನ ಹಲವು ಬಣ್ಣಗಳನ್ನು ಹಿಡಿದಿಡುವ ಹಾಗೆ ಈ ಕೃತಿಯಲ್ಲಿ ಹಲಬಗೆಯ ನಿರೂಪಣೆಗಳಿವೆ.

ಈ ಕೃತಿ ಶುರುವಾಗುವುದೇ ಕಾಡು ತನ್ನನ್ನು ತಾನು ನಿರೂಪಿಸಿಕೊಳ್ಳುವುದರೊಂದಿಗೆ. ಇಲ್ಲಿ ನಕ್ಸಲರ ದಾಳಿಗೆ, ಪೊಲೀಸರ-ಸೈನಿಕರ ದೌರ್ಜನ್ಯಕ್ಕೆ ಜೀವಕಳೆದುಕೊಂಡ ಅಮಾಯಕ ಆತ್ಮಗಳು ಮಾತಾಡುತ್ತವೆ. ಹೊಂಚುಹಾಕಿ ಕೊಲ್ಲುವ ಸಾವು ಮಾತಾಡುತ್ತದೆ. ಹಿಂಸೆಗೆ ಮೂಕಪ್ರೇಕ್ಷಕರಾಗುವ ಪ್ರಾಣಿಗಳು ಮಾತಾಡುತ್ತವೆ, ಅಷ್ಟೇ ಏಕೆ, ಪತ್ರಗಳೂ ಮಾತಾಡುತ್ತವೆ. ಇಂಥ ಹಲಬಗೆಯ ನಿರೂಪಣೆಯ ಕ್ರಮದಿಂದಲೇ ಈ ಪುಸ್ತಕಕ್ಕೊಂದು 'ಕಾಡುಧ್ವನಿ' ದಕ್ಕಿದೆ.

2011ರಿಂದ 2021ರವರೆಗೆ 'ಬಸ್ತರ್' ಅನ್ನು ಕೇಂದ್ರವಾಗಿಟ್ಟುಕೊಂಡು ತಾವು ನಡೆಸಿದ ಹುಡುಕಾಟವನ್ನು ಆಶುತೋಷ್ ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಹಾಗೆಂದು ಇದು ಬರೀ ಅನುಭವ ಕಥನ ಅಷ್ಟೇ ಅಲ್ಲ. ಇಲ್ಲಿ ರಾಮಾಯಣದಂಥ ಮಹಾಕಾವ್ಯಗಳ ಉಲ್ಲೇಖವಿದೆ. ದಂಡಕಾರಣ್ಯದ ಜನಪದ ಕತೆಗಳು ಬಂದುಹೋಗುತ್ತವೆ. ಇತಿಹಾಸ, ವರ್ತಮಾನ, ಭವಿಷ್ಯತ್ತುಗಳು ಇಡಿಕಿರಿದು ಕಾಡುತ್ತವೆ. ತಾವೇ ತೆಗೆದ ಹೆಣಗಳ ಫೋಟೊಗಳು ಬೆನ್ನು ಹತ್ತಿದ ಬೇತಾಳದಂತೆ ಕಾಡುತ್ತವೆ. ವಂಚನೆ, ದ್ರೋಹಗಳು, ನಂಬಿಕೆ, ಬದ್ಧತೆಗಳು, ಕ್ರೌರ್ಯ, ಮುಗ್ಧತೆ, ಕಾರ್ಯತಂತ್ರ ಎಲ್ಲವೂ ತಾಮುಂದು ತಾಮುಂದು ಎಂದು ಈ ಕಥನವನ್ನು ಕಟ್ಟುತ್ತ ಹೋಗಿವೆ.

ಮೂರು ವಾರಗಳ ಕಾಲ ನಕ್ಸಲರೊಂದಿಗೆ ಕಾಡಿನಲ್ಲಿ ಕಳೆದುಬಂದಿರುವ ಆಶುತೋಷ್ ಎಲ್ಲಿಯೂ ಅವರನ್ನು ವೈಭವೀಕರಿಸುವುದಿಲ್ಲ; ಹಾಗೆಂದು ಅವರನ್ನು ಸಾರಾಸಗಟಾಗಿ ಅಲ್ಲಗಳೆದು, ಅವರ ಮುಖವಾಡವನ್ನು ಬಯಲುಗೊಳಿಸುವ ರೋಚಕ ಚಟವೂ ಈ ಕಥನದಲ್ಲಿ ಇಲ್ಲ. ನಕ್ಸಲರ ಮನುಷ್ಯ ಸಹಜ ಆಕಾಂಕ್ಷೆಗಳು, ಸಿದ್ಧಾಂತದೆಡೆಗಿನ ಅವರ ಬದ್ಧತೆಗಳನ್ನು ಕಾಣಿಸುತ್ತಲೇ ಅವರು ಸಾಗುತ್ತಿರುವ ದಾಳಿಯಲ್ಲಿನ ಬಿರುಕುಗಳನ್ನೂ ಕಾಣಿಸುತ್ತಾರೆ. ನಮಗೆ